ಕಡಿಸಿ ಸಾಗಿಸುತ್ತಿದ್ದ. ಹಾಗೆ ವಸೂಲಿ ಮಾಡಿದ ಸಾಮಾನು ಸರಂಜಾಮು, ದನಕರು ಮತ್ತು ಮರ ದಿಮ್ಮಿಗಳನ್ನು ಸಂತೆ ಜಾತ್ರೆಯಲ್ಲಿ ಹರಾಜು ಹಾಕುತ್ತಿದ್ದ. ಬೇರೆ ಬೇರೆ ರಾಜ್ಯ, ದೇಶಗಳ ವರ್ತಕರು ಬಂದು ಅವುಗಳನ್ನು ಕೊಂಡುಕೊಂಡು ತಮ್ಮ ನಾಡಿಗೆ ತೆರಳುತ್ತಿದ್ದರು.

ರಾಜನ ಇಂಥ ಕ್ರೌರ್ಯದಿಂದ ಪ್ರಜೆಗಳು ಬಡವರಾಗುತ್ತಾ, ನಿರ್ಗತಿಕರಾಗುತ್ತಾ ಬಂದರು. ಇಡೀ ರಾಜ್ಯ ಮರಗಿಡಗಳಿಲ್ಲದೆ, ಹಸಿರಿಲ್ಲದೆ ಬಣಗುಡುತ್ತಿತ್ತು. ಮರಗಳಿಲ್ಲದ ಕಾರಣ ಹಕ್ಕಿ ಪಕ್ಷಿಗಳೂ ಇಲ್ಲದೆ, ಚಿಟ್ಟೆ, ದುಂಬಿ, ಇರುವೆ, ಎರೆಹುಳು ಇಂಥವೆಲ್ಲ ನಾಶವಾಗುತ್ತಾ ಬಂದವು. ಇವೆಲ್ಲದರ ಪರಿಣಾಮವಾಗಿ ರೈತರ ಹೊಲಗಳಲ್ಲಿ ಬೆಳೆಗಳೂ ಬೆಳೆಯದೆ ಆಹಾರದ ಕ್ಷಾಮ ತಲೆದೋರಿತು. ಕ್ರಮೇಣ ಮಳೆಯೂ ಇಲ್ಲದೆ ಸಂಪೂರ್ಣವಾಗಿ ಬರ ಆವರಿಸಿಬಿಟ್ಟಿತು. ಆದರೆ ರಾಜನಿಗೆ ಇದಾವುದರ ಕಡೆಗೂ ಗಮನವಿಲ್ಲ. ಅವನಲ್ಲಿ ಬೇಕಾದಷ್ಟು ಸಂಪತ್ತು ಇತ್ತು. ರೈತರಿಂದ ಲೂಟಿ ಹೊಡೆದ ದವಸ ಧಾನ್ಯಗಳಿದ್ದವು. ತನ್ನ ರಾಣಿಯರ ಜೊತೆ ನೀರಾಟ ಆಡುತ್ತಾ, ರಾಜ ಮತ್ತು ಮಂತ್ರಿ ಪರಿವಾರದವರ ಜೊತೆ ಕ್ರೀಡೆಗಳನ್ನು ಆಡುತ್ತಾ ಲೋಲುಪನಾಗಿ ಸುಖದಲ್ಲಿ ಮೈಮರೆತು ಬಿಟ್ಟ. ಪ್ರಜೆಗಳು ಪ್ರಾಣಿ ಪಕ್ಷಿಗಳು ಮರಗಿಡಗಳು ಎಲ್ಲವೂ ನಿಟ್ಟುಸಿರು ಬಿಡತೊಡಗಿದವು. ಆ ಸಂಕಟದ ನಿಟ್ಟುಸಿರು ಶಾಪದ ರೂಪದಲ್ಲಿ ರಾಜನಿಗೆ ತಟ್ಟತೊಡಗಿತು.

ಸುಖದ ಸುಪ್ಪತ್ತಿಗೆಯಲ್ಲಿ ಮೈಮರೆತುಹೋಗಿದ್ದ ರಾಜನಿಗೆ ಬೆನ್ನಿನ ಮೇಲೆ ಒಂದು ಹುಣ್ಣು ಎದ್ದಿತು. ಎಂಥದೋ ಸಣ್ಣ ಗಾಯವಷ್ಟೆ, ವಾಸಿಯಾಗುತ್ತದೆ ಎಂದು ಭಾವಿಸಿ ಸುಮ್ಮನಿದ್ದ. ಆದರೆ ಬರಬರುತ್ತಾ ಗಾಯ ದೊಡ್ಡದಾಗತೊಡಗಿತು. ಬೆನ್ನಿನಲ್ಲಿ ವಿಪರೀತವಾದ ನೋವೂ ಶುರುವಾಯಿತು. ಕಾಲ ಕಳೆದಂತೆ ಅದೊಂದು ರಣಗಾಯವಾಗಿ ಅಸಾಧ್ಯ ಕೀವು ಒಸರತೊಡಗಿತು. ಮೊದಮೊದಲು ತನ್ನ ಅರಮನೆಯ ವೈದ್ಯರಿಂದ ಚಿಕಿತ್ಸೆ ಪಡೆದ. ಗಾಯ ಜಾಸ್ತಿಯಾಯಿತೇ ಹೊರತು ಕಡಿಮೆಯಾಗಲಿಲ್ಲ. ವರ್ತಕರ ಮೂಲಕ ಮಾಹಿತಿ ಪಡೆದು ಹೊರ ರಾಜ್ಯದ ವೈದ್ಯರನ್ನು ಕರೆಸಿದ. ಅವರು ಕೊಟ್ಟ ಔಷಧಿಗಳೂ ಪ್ರಯೋಜನಕ್ಕೆ ಬರಲಿಲ್ಲ. ರಾಜನ ಬೆನ್ನು ರಣಗಾಯದಿಂದ ಬಾತುಕೊಂಡು ಇನ್ನಷ್ಟು ಕೀವು ಸುರಿಯತೊಡಗಿತು. ಈಗ ಅವನು ಸರಿಯಾಗಿ ಮಲಗುವುದಕ್ಕೂ ಸಾಧ್ಯವಾಗುತ್ತಿರಲಿಲ್ಲ. ಅಸಾಧ್ಯ ನೋವಿನಿಂದ ಚೀರಾಡುತ್ತಿದ್ದ. ಅವನ ಎಲ್ಲ ರಾಣಿಯರೂ ನಿಂತು ಉಪಚರಿಸಿದರೂ ನೋವು ತಾಳಲಾರದೆ ಒದ್ದಾಡುತ್ತಿದ್ದ. ಮಂತ್ರಿ ಹಾಗೂ ಅರಮನೆ ಅಧಿಕಾರಿಗಳು ದೇಶ ವಿದೇಶಗಳಿಂದ ಪ್ರಸಿದ್ಧ ವೈದ್ಯರನ್ನು ಕರೆಸಿದರೂ ಪ್ರಯೋಜನವಾಗಲಿಲ್ಲ. ಕಾಲ ಕಳೆದಂತೆ ಒಂದು ಹುಣ್ಣಿನ ಬದಲು ಏಳು ಹುಣ್ಣುಗಳು ಉದ್ಭವವಾಗಿ ಇಡೀ ಬೆನ್ನನ್ನು ಆವರಿಸಿದವು. ರಾಜನ ಈ ಚಿಂತಾಜನಕ ಸ್ಥಿತಿಯನ್ನು ನೋಡಿ ಮರುಗಿದ ಮಂತ್ರಿ ಡಂಗುರ ಸಾರಿಸಿ ಒಂದು ಸಂದೇಶವನ್ನು ಹೊರಡಿಸಿದ. ನಮ್ಮ ರಾಜನ ಬೆನ್ನಿನಲ್ಲಿ ಎದ್ದಿರುವ ಹುಣ್ಣನ್ನು ಯಾರು ವಾಸಿ ಮಾಡುತ್ತಾರೋ ಅವರಿಗೆ ರಾಜನ ಸಂಪತ್ತಿನ ಬಹು ಮುಖ್ಯ ಭಾಗವಾದ ಎಲ್ಲ ಚಿನ್ನವನ್ನು ಬಳುವಳಿಯಾಗಿ ನೀಡಲಾಗುವುದು ಎಂಬುದು ಮಂತ್ರಿಯ ಸಂದೇಶವಾಗಿತ್ತು. ಚಿನ್ನದ ಆಸೆಯಿಂದ ಹಿರಿ ವೈದ್ಯರು, ಕಿರಿ ವೈದ್ಯರು, ರಾಜ ವೈದ್ಯರು, ಹಿಮಾಲಯದ ವೈದ್ಯರು, ಕೇರಳದ ವೈದ್ಯರು ಮುಂತಾಗಿ ಅದೆಷ್ಟೋ ವೈದ್ಯರು ಅರಮನೆಗೆ ಬಂದು ಗಾಯ ವಾಸಿ ಮಾಡಲು ಪ್ರಯತ್ನಿಸಿದರು. ಯಾರು ಏನೇ ಮಾಡಿದರೂ ಅವನ ಹುಣ್ಣುಗಳು ವಾಸಿಯಾಗಲಿಲ್ಲ. ನೋವು ನಿರಂತರವಾಯಿತು. ರಾಜ ಬದುಕುವುದೇ ಕಷ್ಟ ಎಂಬ ಚಿಂತಾಜನಕ ಸ್ಥಿತಿ ಉಂಟಾಯಿತು. ರಾಣಿಯರು ಹಾಗೂ ಮಂತ್ರಿಯೂ ಸೇರಿದಂತೆ ರಾಜ ಪರಿವಾರದವರೆಲ್ಲರೂ ದುಃಖಿತರಾಗಿ ರಾಜನ ಸಾವನ್ನು ನಿರೀಕ್ಷಿಸತೊಡಗಿದರು.

ಅಷ್ಟರಲ್ಲಿ ಅರಮನೆಯ ಮುಂದೆ ಒಬ್ಬ ವಿಚಿತ್ರ ವ್ಯಕ್ತಿ ಪ್ರತ್ಯಕ್ಷನಾದ. ಉದ್ದವಾದ ಬಿಳಿ ಗಡ್ಡ ಬಿಸಿಲಿಗೆ ಹೊಳೆಯುತ್ತಿತ್ತು. ಕಣ್ಣಲ್ಲಿ ತೇಜಸ್ಸಿತ್ತು. ಸೊರಗಿದ ದೇಹವಾದರೂ ಮುಖದಲ್ಲಿ ಕಳೆಯಿತ್ತು.